**ಪಿ.ಡಬ್ಲ್ಯೂ : 1 - ಶಿವಣ್ಣ**

**ಸಾಕ್ಷಿಗೆ ದಿನಾಂಕಃ 14.11.2024. ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 3ನೇ ಎದುರುದಾರರ ಪರ ಹೆಚ್.ಆರ್.ಎಸ್. ವಕೀಲರ ಮೂಲಕ:**

ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ನಾನು ದೂರನ್ನು ಸಹ ನೀಡಿರುವುದಿಲ್ಲ ಎಂದರೆ ಸರಿ. ನಮ್ಮ ಗ್ರಾಮದ ಆನಂದ ಎಂಬುವವರ ಇದೇ ನ್ಯಾಯಾಯಲದಲ್ಲಿ ಅಪಘಾತದ ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಅದು ಎಂ.ವಿ.ಸಿ. **1344/2017** ಎಂದರೆ ಸರಿ. ಸದರಿ ಅರ್ಜಿಯು ರಿಲಯನ್ಸ್ ವಿಮಾ ಕಂಪನಿಯ ಮೇಲೆ ತೀರ್ಮಾನವಾಗಿರುತ್ತದೆ ಎಂದರೆ ಸರಿ. ಮೃತ ವ್ಯಕ್ತಿಗೆ **14** ವರ್ಷ ವಯಸ್ಸಾಗಿತ್ತು ಎಂಧು ದೂರಿನಲ್ಲಿ ಹೇಳಲಾಗಿದೆ ಎಂದರೆ **19** ವರ್ಷ ಎಂದು ಹೇಳಿರುತ್ತೇವೆ. ದೂರಿನಲ್ಲಿ **14** ವರ್ಷ ಎಂದು ಹೇಳಿರುತ್ತೇವೆ ಎಂದರೆ ಸರಿ. ನನ್ನ ಮಗ ಮೃತ ಮಧುಸೂಧನ್ ನಮ್ಮ ಗ್ರಾಮದಲ್ಲಿ ಯಾರು ಕೆಲಸಕ್ಕೆ ಕರೆಯುತ್ತಾರೆ ಅಲ್ಲಿಗೆ ಕೆಲಸ ಮಾಡಲು ಹೋಗುತ್ತಿದ್ದರು ಎಂದರೆ ಸರಿ. ನನ್ನ ಮಗನು ಒಬ್ಬ ವ್ಯಕ್ತಿಯ ಬಳಿ ಕಾರ್ಮಿಕನಾಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ.

2. ನನ್ನ ಮಗನು ಲೋಡರ್ ಮತ್ತು ಅನ್‌ಲೋಡರ್ ಆಗಿ ಕೆಲಸ ಮಾಡುತ್ತಿದ್ದರು ಎಂದು ದೂರಿನಲ್ಲಿ ಹೇಳಿರುವುದಿಲ್ಲ. ನನ್ನ ಮಗನು 03ನೇ ಎದುರುದಾರರ ಬಳಿ ಕಾರ್ಮಿಕನಾಗಿ ಇದ್ದರು ಎಂಬುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ. 3ನೇ ಎದುರುದಾರರು ನನ್ನ ಮಗನಿಗೆ ಘಟನೆಯ ದಿನ 500/- ರೂ. ಕೂಲಿ ಕೊಟ್ಟಿದ್ದರು ಎಂಬುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ. ಅಪಘಾತವು ಬಸ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ. ಬಸ್ ಚಾಲಕನ ಅತೀವೇಗ ಮತ್ತು ಅಜಾಗರೂಕತೆಯಿಂಧ ಅಪಘಾತವಾಗಿದೆ ಎಂಧು ನಾನು ದೂರು ನೀಡಿರುತ್ತೇನೆ ಎಂದರೆ ಸರಿ. ಅದೇ ರೀತಿ ಪೊಲೀಸರು ತನಿಖೆ ನಡೆಸಿ, ಬಸ್ ಚಾಲಕನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಅರ್ಜಿಯಲ್ಲಿ ಮತ್ತು ನನ್ನ

ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಿಕೆಯನ್ನು ನಾಗೇಂದ್ರ ಬರೆಸಿರುತ್ತಾರೆ. ಸದರಿ ನಾಗೇಂದ್ರ ಎಂದರೆ ನನ್ನ ಅಣ್ಣನ ಮಗ ಆಗಿರುತ್ತಾರೆ. ನನ್ನ ಮಗನು ಯಾವತ್ತೂ 3ನೇ ಎದುರುದಾರರ ಬಳಿ ಕೆಲಸ ಮಾಡುತ್ತಿರಲಿಲ್ಲ. ಬಸ್ ಅತೀವೇಗವಾಗಿ ಬಂದು ಫುಟ್‌ಪಾತ್‌ನಲ್ಲಿ ನಿಂತಿದ್ದ ನನ್ನ ಮಗನಿಗೆ ಡಿಕ್ಕಿ ಪಡಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿ. ನಾನು ಕೇವಲ ಬಸ್‌ನ ಮಾಲೀಕ ಮತ್ತು ಚಾಲಕನನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಬೇಕಾಗಿತ್ತು ಆದರೆ 3ನೇ ಎದುರುದಾರರನ್ನು ಅನವಶ್ಯಕವಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಇದ್ದರೂ ಸಹ ನಾನು ಬೇರೆಯವರು ಹೇಳಿದಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೂ 3ನೇ ಎದುರುದಾರರಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಹೇಳಿರುವಂತೆ ವೆಚ್ಚ ಮಾಡಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಷಯಗಳು ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: 4ನೇ ಎದುರುದಾರರ ಪರ ಎನ್.ಎಸ್.ಎಸ್.ವಕೀಲರ ಮೂಲಕ:</u>**

ನನ್ನ ಮಗನಿಗೆ ಘಟನೆಯ ಸಮಯದಲ್ಲಿ 19 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಮಗನು ಅಪಘಾತದ ಪೂರ್ವದಲ್ಲಿ ವಿದ್ಯಾಭ್ಯಾಸ ಮಾಡಲು ಹೋಗುತ್ತಿದ್ದರು ಎಂದರೆ ಹೋಗುತ್ತಿದ್ದು, ಆ ನಂತರ ಬಿಟ್ಟಿರುತ್ತಾರೆ. ನನ್ನ ಮಗ 5ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ಮಗನು ವಿದ್ಯಾಭ್ಯಾಸ ಮಾಡುತ್ತಿದ್ದ ಬಗ್ಗೆ ವಿದ್ಯಾಭ್ಯಾಸದ ದಾಖಲೆಗಳನ್ನು ಕೊಡಲು ನನಗೆ ಗೊತ್ತಾಗುವುದಿಲ್ಲ.

ನನ್ನ ಮಗನು ವಿದ್ಯಾಭ್ಯಾಸ ಮಾಡಲು ಹೋಗುತ್ತಿದ್ದರೂ ಸಹ ಕೇವಲ 5ನೇ ತರಗತಿ ಓದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನು ಶಾಲೆಗೆ ಹೋಗುವ ಅವಧಿಯಲ್ಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸ್ಕೂಲ್ ಬಿಟ್ಟ ನಂತರ ಕೆಲಸಕ್ಕೆ ಹೋಗುತ್ತಿದ್ದರು. ನನ್ನ ಮಗನಿಗೆ 14 ವರ್ಷ ಆಗಿದ್ದಾಗ ಶಾಲೆಗೆ ಹೋಗುತ್ತಿದ್ದರು ಎಂಧರೆ ಸರಿ. ಆದ್ದರಿಂಧ ಶಾಲೆಗೆ ಹೋಗುತ್ತಿದ್ದ ಅವಧಿಯಲ್ಲಿ ಅವರು ಕೂಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿ. ಅದೇ ರೀತಿ ನನ್ನ ಮಗನು 3ನೇ ಎದುರುದಾರರ ಬಳಿ ಸಹ ಕೂಲಿಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿ. ನನ್ನ ಮಗನು ಕೂಲಿ ಕೆಲಸಕ್ಕೆ ಹೋಗುತ್ತಿಲ್ಲವಾದ ಕಾರಣ ನನ್ನ  ಮಗನು ಮತ್ತು 3ನೇ ಎದುರುದಾರರ ನಡುವೆ ಮಾಲೀಕ ಮತ್ತು ಕಾರ್ಮಿಕ ಸಂಬಂಧ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂಧುವರೆದು 3ನೇ ಎದುರುದಾರರೇ ಬಂದು ನನ್ನ ಮಗನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ.

2. ನನ್ನ ಮಗನು ಎಲ್ಲಿಗೆ ಹೋಗಿ ಬರುತ್ತಿದ್ದರು ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಅಪಘಾತ ಆಯಿತು ಎಂದು ಹೇಳುವ ಸಮಯದಲ್ಲಿ ನನ್ನ ಮಗನು ಎಲ್ಲಿಗೆ ಹೋಗಿದ್ದರು ಮತ್ತು ಎಲ್ಲಿ  ನಿಂತಿದ್ದರು ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ನನ್ನ ಮಗನು 3ನೇ ಎದುರುದಾರರ ಬಳಿ ಕೂಲಿ ಕೆಲಸಕ್ಕೆ ಹೋಗಿಲ್ಲದೇ ಇದ್ದರೂ ಸಹ ಅವರ ಬಳಿ  ಕೆಲಸ ಮಾಡುತ್ತಿದ್ದರು ಎಂದು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು  ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನು ಅಪಘಾತವಾಯಿತು ಎಂದು ಹೇಳುವ ಸಮಯದಲ್ಲಿ ಅಪ್ರಾಪ್ತ ವಯಸ್ಕ ಆಗಿದ್ದ ಕಾರಣ ಕೂಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ನಾನೇ ಖರ್ಚು ವೆಚ್ಚಕ್ಕೆ ಹಣ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮಗ ಅಪ್ರಾಪ್ತ ವಯಸ್ಕ ಆಗಿದ್ದ ಕಾರಣ ಅವನಿಗೆ ದುಡಿಯುವ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಮತ್ತು 3ನೇ ಎದುರುದಾರರ ನಡುವೆ ಕಾರ್ಮಿಕ ಮತ್ತು ಮಾಲೀಕ ಸಂಬಂಧ ಇಲ್ಲದೇ ಇರುವ ಕಾರಣ ಕೂಲಿ ಹಣ ಕೊಡುವ ಸಂಭವ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನು 3ನೇ ಎದುರುದಾರರ

ಬಳಿ ಕಾರ್ಮಿಕನಾಗಿ ಕೆಲಸ ಮಾಡಿಲ್ಲದೇ ಇದ್ದರೂ ಸಾದ್ಯವಾದರೆ ಪರಿಹಾರ ಬರಲಿ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಳವಳ್ಳಿ.